# Reaching the Unreached
Through
# Science & Technology
(Collection of Articles)

Accrtedited by NAAC with "A" Grade

Accrtedited by IAO

Certified by ISO

Moulding Character & Careers




GDA FOUNDATION

# SURANA COLLEGE
PERMANENTLY AFFILIATED TO BANGALORE UNIVERSITY

# Reaching the Unreached Through Science & Technology

**(Collection of Articles)**


| | | |
|---|---|---|
| Editor | : | Dr. B.R. Satyanarayana |
| Publisher | : | Mrs. Archana Surana for Surana College<br>No. 16, Dr. Parvathamma Rajakumar Road<br>Jayanagar, Bangalore - 560 004<br>Ph: 080-26642292; 080-22446141<br>*Email: ugprincipal@suranacollege.edu.in*<br>www.suranacollege.edu.in |

| | | |
|---|---|---|
| Copy Right | : | Surana College |
| First Edition | : | 2017 |
| Pages | : | xxiv+626 |
| Copies | : | 250 |

**ISBN : 978-81-931907-1-5**

| | | |
|---|---|---|
| Page Design | : | Dr. B.R. Satyanarayana |
| Cover Page | : | Mr. Girish G. |

| | | |
|---|---|---|
| Printer | : | Trishul Enterprises, Bangalore 560079 |

101. Vigyaan aur takniki shetra mein Hindi — Talla Niranjan | 602

102. Hindi Sahitya Mein Naatya Kruti Shaily par Takniki Yug Ka Prabhav — Dr. Jai Laxmi R. | 605

103. Jan-Sanchar Madhyam Aur Yuva Varg — Dr. Shekh Razya | 608

## TRACK - 6:
## Languages: Kannada

104. ಗಣಕಯಂತ್ರದ ಸಹಾಯದಿಂದ ಹಳೆಗನ್ನಡ ಪದ್ಯದ ಕಲಿಕೆ — ಶ್ರೀನಿವಾಸ ಕಾಂತನವರ | 610

105. ಹೊರನಾಡ ಕನ್ನಡಿಗರಿಗೆ ಕನ್ನಡ ಕಲಿಯಲು ಸುಲಭವಾದ ಮಾರ್ಗಗಳು — ಬಾಲರಾಜು ಬಿ.ವಿ. | 612

106. ಕನ್ನಡದ ಪ್ರಮುಖ ಸಾಹಿತ್ಯ ಕೃತಿಗಳ ಡಿಜಿಟಲೀಕರಣ — ಸವಿತ.ವಿ | 616

107. ಕನ್ನಡಿಗರಲ್ಲದವರು ಕನ್ನಡ ಕಲಿಯುವ ಸುಲಭ ವಿಧಾನಗಳು — ಡಾ|| ಚಿಕ್ಕಹೆಜ್ಜಾಜಿ ಮಹದೇವ್ | 620

108. ಕನ್ನಡ ಭಾಷೆಯ ಮೇಲೆ ತಂತ್ರಜ್ಞಾನದ ಪರಿಣಾಮ — ಡಾ. ಮಮತ ಎಲ್. ಆಲಮೇಲ | 624

**Disclaimer:**

**The opinions, information and views expressed by the authors in their articles are purely their own and do not necessarily reflect the opinion and views of the publisher/ Surana College.**

- **Editor**

# ಕನ್ನಡದ ಪ್ರಮುಖ ಸಾಹಿತ್ಯ ಕೃತಿಗಳ ಡಿಜಿಟಲೀಕರಣ

**ಸವಿತ. ವಿ.**

ಸಂಶೋಧನಾ ವಿದ್ಯಾರ್ಥಿನಿ, ಭಾಷಾಂತರ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

Ph: 9379112202

*Email: n.ninada@gmail.com*

ಸಹಿತಯೋಃ ಶಬ್ದಾರ್ಥಯೋಃ ಭಾವಃ ಸಾಹಿತ್ಯಂ ಅಂದರೆ ಶಬ್ದ ಅರ್ಥ ಸಹಿತವಾದ ಸುಂದರ ಕವಿಕರ್ಮವೇ ಸಾಹಿತ್ಯ. ಕವಿಯ ಈ ಕಾರ್ಯದ ಉದ್ದೇಶ ಜನರ ಮನರಂಜನೆ, ನೀತಿ, ಲೌಕಿಕ-ಅಲೌಕಿಕ ವಿಚಾರಗಳ ಜ್ಞಾನವನ್ನು ತಿಳಿಸುವುದಾಗಿದೆ. ಒಬ್ಬ ಕವಿಯ ಚಿಂತನೆ ಕೇವಲ ಆಯಾ ಕಾಲ ದೇಶಕ್ಕೆ ಸೀಮಿತವಾಗಿರದೆ, ಸಾರ್ವತ್ರಿಕ ಹಾಗೂ ಸಾರ್ವಕಾಲಿಕವಾದುದು. ಜಾತಿ, ಮತ, ಧರ್ಮ, ಕಾಲ ದೇಶ ಎಲ್ಲವನ್ನು ಮೀರಿ ಬೆಳೆಯುವಂತಹುದು. ಕನ್ನಡ ಭಾಷೆ ಹಾಗು ಸಾಹಿತ್ಯಕ್ಕೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಸಮೃದ್ಧವಾದ ಹಾಗು ಉತ್ಕೃಷ್ಟವಾದ ಸಾಹಿತ್ಯ ಕೃತಿಗಳು ರಚನೆಯಾಗಿವೆ. ಆದರೆ ಪ್ರಸ್ತುತ ಲಭ್ಯವಿರುವ ಪೂರ್ವದ ಕೃತಿಗಳ ಸಂಖ್ಯೆ ಕಡಿಮೆ. ಎಷ್ಟೋ ಕವಿಗಳ ಕೃತಿಗಳು ಅಲಭ್ಯ. ಅಲ್ಲದೆ ಲಭ್ಯವಿರುವ ಕೃತಿಗಳೂ ನಾಶವಾಗುವ ಹಂತದಲ್ಲಿವೆ. ಇಂತಹ ಸಾಹಿತ್ಯವು ಜೀವಂತಿಕೆಯಿಂದ ಹಾಗೂ ನಿರಂತರವಾಗಿ ಜನರಿಗೆ ತಲುಪುವಂತಾಗಬೇಕಾದರೆ ಅಂತಹ ಕೃತಿಗಳನ್ನು ಡಿಜಿಟಲೀಕರಣ ಮಾಡುವುದು ಅವಶ್ಯಕ.

ಮೊದಲನೆಯದಾಗಿ ಡಿಜಿಟಲೀಕರಣ ಎಂದರೆ ಏನು ಎಂದು ಅರ್ಥೈಸಿಕೊಳ್ಳುವುದು ಅವಶ್ಯಕ. ಡಿಜಿಟ್ ಎಂದರೆ ಸಂಖ್ಯೆ ಎಂದರ್ಥ. ಕಂಪ್ಯೂಟರಿನ ಭಾಷೆಯನ್ನು ಬೈನರಿ ಲ್ಯಾಂಗ್ವೇಜ್ ಎನ್ನುತ್ತಾರೆ. ಇದು ಎಲ್ಲಾ ದತ್ತಾಂಶವನ್ನು ಸ್ವೀಕರಿಸುವುದು ೦-೧ ಡಿಜಿಟ್ ರೂಪದಲ್ಲಿ. ಆದ್ದರಿಂದ ಕಂಪ್ಯೂಟರ್‌ನಲ್ಲಿ ಯಾವುದೇ ದತ್ತಾಂಶ/ಮಾಹಿತಿಯನ್ನು ಶೇಖರಿಸುವುದನ್ನು ಡಿಜಿಟಲೀಕರಣ ಎಂದು ಕರೆಯುತ್ತಾರೆ. ಇದರಲ್ಲಿ ಪಠ್ಯ, ಚಿತ್ರ, ಮುದ್ರಿತವಾಗಿರುವ ಶ್ರವಣ ಹಾಗೂ ದೃಶ್ಯ ಚಿತ್ರಗಳು ಮುಂತಾದ ಎಲ್ಲಾ ಮಾದರಿಯ ವಿಷಯಗಳನ್ನು ಡಿಜಿಟಲೀಕರಣ ಮಾಡಬಹುದಾಗಿದೆ.

ಕಾಲದಿಂದ ಕಾಲಕ್ಕೆ ಜನರ ಜೀವನ ಶೈಲಿ ಬದಲಾಗುತ್ತಾ ಬಂದಂತೆ, ಹೊಸ ಆವಿಷ್ಕಾರಗಳು ನಡೆದಂತೆ ಅದಕ್ಕೆ ಹೊಂದಾಣಿಕೆಯಾಗುವ ಅವಶ್ಯಕತೆ ಸಹಜ. ಇಂದು ಮನುಷ್ಯ ಜಾಗತೀಕರಣ ಹೊಸ್ತಿಲಲ್ಲಿ ಇದ್ದಾನೆ. ಕೂಪಮಂಡೂಕದಂತೆ ತನ್ನ ಆಲೋಚನೆಗಳಿಗೆ ನಿರ್ಬಂಧಗಳನ್ನು ಹೇರಿ ಕುಳಿತುಕೊಳ್ಳದೆ, ತನ್ನ ಜ್ಞಾನದ ವಿಸ್ತಾರವನ್ನು ಹೆಚ್ಚಿಸಿಕೊಂಡಿದ್ದಾನೆ. ದೇಶ ಸುತ್ತು ಕೋಶ ಓದು ಎಂಬ ಗಾದೆಯನ್ನು ವಿಸ್ತರಿಸಿ ಜಗತ್ತನ್ನು ಸುತ್ತಿ ಅಲ್ಲಿನ ಕೋಶಗಳನ್ನು ಓದಿ ತನ್ನ ಅನುಭವದ ಮಟ್ಟವನ್ನು ಹೆಚ್ಚಿಸಿಕೊಂಡಿದ್ದಾನೆ. ಹೊಸ ಅನುಭವಗಳು ದೊರೆತಂತೆ ಅವನ ಆಲೋಚನೆಗಳು, ಜೀವನ ಶೈಲಿ ಬದಲಾಗುತ್ತವೆ.

೨೧ನೇ ಶತಮಾನವನ್ನು ಮಾಹಿತಿ ತಂತ್ರಜ್ಞಾನ ಯುಗವೆಂದೇ ಕರೆಯಲಾಗಿದೆ. ಪ್ರಸ್ತುತ ಎಲ್ಲಾ ಮಾಹಿತಿಯನ್ನು ಅಂತರ್ಜಾಲದ ಮುಖಾಂತರ ತನಗೆ ಬೇಕಾದ ಭಾಷೆಯಲ್ಲಿ ಪಡೆಯಬಹುದಾಗಿದೆ. ಇದು ಕನ್ನಡ ಭಾಷೆಗೂ ಲಭ್ಯವಿದೆ. ಡಿಜಿಟಲೀಕರಣ ಮಾಡುವುದರಿಂದ ಆಗುವ ಅನುಕೂಲಗಳು:-